**<u>ಪ್ರಧಾನ ದಿವಾಣಿ ನ್ಯಾಯಧೀಶರು ಹಾಗೂ ಪ್ರ.ದ.ನ್ಯಾ. ದಂ .ಗಳ ನ್ಯಾಯಾಲಯ, ರೋಣ.</u>**

**<u>ಸಿ.ಸಿ. ನಂ.1226/2023</u>**

ಫಿರ್ಯಾದಿದಾರರು - ಕರ್ನಾಟಕ ಸರ್ಕಾರ (ಗಜೇಂದ್ರಗಡ ಪೋಲಿಸ್)

ವಿರುದ್ಧ

ಆರೋಪಿ - ಯಲ್ಲಪ್ಪ ತಂದೆ ವಿಠ್ಠಪ್ಪ ಅಚ್ಚಲಕರ,
ವಯಾಃ 49 ವರ್ಷ, ಉಃ ರೀಕ್ಷಾ ಚಾಲಕ,
ಸಾಃ ಅಮರಗಟ್ಟಿ, ತಾಃ ಗಜೇಂದ್ರಗಡ, ಜಿಃ ಗದಗ.

**<u>ಅಪಾದನೆ</u>**

ಶ್ರೀ. ಆದಿತ್ಯ ಆರ್. ಕಲಾಲ್, ಬಿ.ಎ.ಎಲ್., ಎಲ್‌ಎಲ್.ಬಿ., ಎಲ್‌ಎಲ್.ಎಂ. ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ರೋಣ ಆದ ನಾನು ನಿಮ್ಮ ವಿರುದ್ಧ ಮಾಡುತ್ತಿರುವ ಅಪಾದನೆ ಏನೆಂದರೆಃ-

ದಿನಾಂಕ 10/10/2023 ರಂದು ಮಧ್ಯಾಹ್ನ 01-45 ಗಂಟೆ ಸುಮಾರಿಗೆ ಗಜೇಂದ್ರಗಡ ಪೋಲಿಸ್ ಠಾಣೆ ಸರಹದ್ದಿಗೆ ಸೇರಿದ ಗಜೇಂದ್ರಗಡ - ಬದಾಮಿ ರಸ್ತೆಯ ಬೆವಿನಕಟ್ಟಿ ಗ್ರಾಮದ ಹತ್ತಿರ ಶ್ರೀಶೈಲಯ್ಯ ತಂದಕೆ ಶಂಕ್ರಯ್ಯ ಕಳ್ಳಿಮಠ ಇವರ ಲಕ್ಕಿ ಡಾಬಾದ ಹತ್ತಿರ ರಸ್ತೆಯ ಮೇಲೆ ಆರೋಪಿಯಾದ ನೀವು ಚಲಾಯಿಸುತ್ತಿದ್ದ ಅಪ್ಪೆ ಪ್ಯಾಸೇಂಜರ್ ರಿಕ್ಷಾ ನೋಂದಣಿ ಸಂಖ್ಯೆ ಕೆಎ-26/ಎ-9658 ನೇದ್ದನ್ನು ಗಜೇಂದ್ರಗಡ ಕಡೆಯಿಂದ ರಾಜೂರ ಕಡೆಗೆ ದುಡಿಕಿನಿಂದ ಚಲಾಯಿಸಿಕೊಂಡು ಹೋಗಿರುತ್ತಿರಿ ಎಂದು, ಈ ಮೂಲಕ ಭಾ.ದಂ.ಸಂ. ಕಲಂ **279** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ಆಪಾದನೆ ಮಾಡುತ್ತಿದ್ದೇನೆ.

2. ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಲಾಯಿಸುತ್ತಿದ್ದ ಅಪ್ಪೆ ಪ್ಯಾಸೇಂಜರ್ ರಿಕ್ಷಾ ನೋಂದಣಿ ಸಂಖ್ಯೆ ಕೆಎ-26/ಎ-9658 ನೇದ್ದನ್ನು ಗಜೇಂದ್ರಗಡ ಕಡೆಯಿಂದ ರಾಜೂರ ಕಡೆಗೆ ದುಡುಕಿನಿಂದ ಚಲಾಯಿಸಿಕೊಂಡು ಹೋಗಿ, ಬೆವಿನಕಟ್ಟಿ ಗ್ರಾಮದ ಹತ್ತಿರ ಶ್ರೀಶೈಲಯ್ಯ ತಂದಕೆ ಶಂಕ್ರಯ್ಯ ಕಳ್ಳಿಮಠ ಇವರ ಲಕ್ಕಿ ಡಾಬಾದ ಹತ್ತಿರ ರೀಕ್ಷಾದ ಮೇಲೆ ನಿಯಂತ್ರಣವನ್ನು ಕಳೆದುಕೊಂಡು ರೀಕ್ಷಾವನ್ನು ಪಲ್ಟಿ ಮಾಡಿ ಕೆಡವಿ ಅಪಘಾತ ಪಡಿಸಿ, ರೀಕ್ಷಾದಲ್ಲಿ ಕುಳಿತುಕೊಂಡಿದ್ದ ಚಾಸಾ-1 ರವರ ಬಲಗಡೆಯ ಕಣ್ಣಿನ ಹತ್ತಿರ, ಬಲಗಡೆಯ ಹಣೆಗೆ ಹಾಗೂ ಮೊಣಕಾಲಿಗೆ ಸಾದಾ ಸ್ವರೂಪದ ಗಾಯ

ಪಡಿಸಿರುತ್ತೀರಿ ಎಂದು, ಈ ಮೂಲಕ ಭಾ.ದಂ.ಸಂ. ಕಲಂ **337** ರಡಿಯಲ್ಲಿ ಶಿಕ್ಷಾರ್ಹ ಎಸಗಿರುತ್ತೀರೆಂದು ಆಪಾದನೆ ಮಾಡುತ್ತಿದ್ದೇನೆ.

3. ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಲಾಯಿಸುತ್ತಿದ್ದ ಅಪ್ಪೆ ಪ್ಯಾಸೇಂಜರ್ ರಿಕ್ಷಾ ನೋಂದಣಿ ಸಂಖ್ಯೆ ಕೆಎ-26/ಎ-9658 ನೇದ್ದನ್ನು ಗಜೇಂದ್ರಗಡ ಕಡೆಯಿಂದ ರಾಜೂರ ಕಡೆಗೆ ದುಡುಕಿನಿಂದ ಚಲಾಯಿಸಿಕೊಂಡು ಹೋಗಿ, ಬೆವಿನಕಟ್ಟಿ ಗ್ರಾಮದ ಹತ್ತಿರ ಶ್ರೀಶೈಲಯ್ಯ ತಂದಕೆ ಶಂಕ್ರಯ್ಯ ಕಳ್ಳಿಮಠ ಇವರ ಲಕ್ಕಿ ಡಾಬಾದ ಹತ್ತಿರ ರೀಕ್ಷಾದ ಮೇಲೆ ನಿಯಂತ್ರಣವನ್ನು ಕಳೆದುಕೊಂಡು ರೀಕ್ಷಾವನ್ನು ಪಲ್ಟಿ ಮಾಡಿ ಕೆಡವಿ ಅಪಘಾತ ಪಡಿಸಿ, ರೀಕ್ಷಾದಲ್ಲಿ ಕುಳಿತುಕೊಂಡಿದ್ದ ಸೀತಮ್ಮ ಕೋಂ ದೇವಲೆಪ್ಪ ಲಮಾಣಿ, ವಯಾಃ 68 ವರ್ಷ, ಸಾಃ ಅಮರಗಟ್ಟಿ ಇವರ ತಲೆಗೆ ಭಾರಿ ಗಾಯವಾಗಿ ಸ್ಥಳದಲ್ಲಿಯೇ ಮರಣ ಹೊಂದಿರುತ್ತಾರೆ ಹಾಗೂ ಆ ವ್ಯಕ್ತಿಯ ಮರಣ ನಿಮ್ಮ ದುಡುಕಿನ ಕೃತ್ಯದಿಂದ ಆಗಿದೆ ಎಂದು, ಈ ಮೂಲಕ ಭಾ.ದಂ.ಸಂ. ಕಲಂ **304(ಎ)** ರಡಿಯಲ್ಲಿ ಶಿಕ್ಷಾರ್ಹ ಎಸಗಿರುತ್ತೀರೆಂದು ಆಪಾದನೆ ಮಾಡುತ್ತಿದ್ದೇನೆ.

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಅಧಿಕೃತ ಚಾಲನಾ ಪರವಾನಿಗೆಯನ್ನು ಪಡೆಯದೇ ಅಪ್ಪೆ ಪ್ಯಾಸೇಂಜರ್ ರಿಕ್ಷಾ ನೋಂದಣಿ ಸಂಖ್ಯೆ: ಕೆಎ-26/ಎ-9658 ನೇದ್ದನ್ನು ಚಲಾಯಿಸಿರುತ್ತೀರಿ ಎಂದು ಈ ಮೂಲಕ ಎಂ.ವಿ. ಕಾಯ್ದೆ ಕಲಂ **3** ರೆ/ವಿ **181** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ಆಪಾದನೆ ಮಾಡುತ್ತಿದ್ದೇನೆ.

5. ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಅಪ್ಪೆ ಪ್ಯಾಸೇಂಜರ್ ರಿಕ್ಷಾ ನೋಂದಣಿ ಸಂಖ್ಯೆ: ಕೆಎ-26/ಎ-9658 ನೇದ್ದರಲ್ಲಿ ಮಿತಿಗಿಂತ 04 ಜನರನ್ನು ಪ್ರಯಾಣಿಸಲು ಅವಕಾಶ ಇದ್ದರೂ ಸಹಿತ 06 ಜನ ಪ್ರಯಾಣಿಕರನ್ನು ಸಾಗಿಸಿಕೊಂಡು ಚಲಾಯಿಸಿರುತ್ತೀರಿ ಎಂದು, ಈ ಮೂಲಕ ಎಂ.ವಿ. ಕಾಯ್ದೆ ಕಲಂ **194(ಎ)** ರಡಿಯಲ್ಲಿ ಶಿಕ್ಷಾರ್ಹ ಎಸಗಿರುತ್ತೀರೆಂದು ಆಪಾದನೆ ಮಾಡುತ್ತಿದ್ದೇನೆ.

6. ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಅಧಿಕೃತ ವಾಹನದ ವಿಮೆಯನ್ನು ಮಾಡಸದೇ ಅಪ್ಪೆ ಪ್ಯಾಸೇಂಜರ್ ರಿಕ್ಷಾ ನೋಂದಣಿ ಸಂಖ್ಯೆ: ಕೆಎ-26/ಎ-9658 ನೇದ್ದನ್ನು ಚಲಾಯಿಸಿರುತ್ತೀರಿ ಎಂದು, ಈ ಮೂಲಕ ಎಂ.ವಿ. ಕಾಯ್ದೆ ಕಲಂ **196** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿದೆ.

ಮೇಲ್ಕಂಡ ಆರೋಪಗಳನ್ನು ಆರೋಪಿಯಾದ ನೀವು ಈ ನ್ಯಾಯಲಯದ ವಿಚಾರಣಾ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ಸದರಿ ಆರೋಪಗಳಿಗೆ ನನ್ನ ಮುಂದೆ ವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ನಿರ್ದೇಶಿಸುತ್ತೀದ್ದೇನೆ.

ದಿನಾಂಕಃ

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ರೋಣ.

<u>ಆರೋಪಿಯ ಹೇಳಿಕೆ</u>

ಪ್ರಶ್ನೆ 1) ಈಗ ಓದಿ ಹೇಳಲಾದ ಆಪಾದನೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉತ್ತರಃ-

ಪ್ರಶ್ನೆ 2) ನೀಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ನಡೆಯಬೇಕಾ?

ಉತ್ತರಃ-

(ಆರೋಪಣೆಯನ್ನು ಆರೋಪಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಅವರ ಹೇಳಿಕೆಯನ್ನು ಪಡೆದು ನಮೂದಿಸಿದ್ದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣಿಕರಿಸುತ್ತೇನೆ)

ದಿನಾಂಕಃ

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ರೋಣ.

<u>ಆರೋಪಿಯ ಸಹಿಃ</u>